167

ಇಸೋಫನ ಕಥೆಗಳು

(ಭಾಗ ೧)

★

ಸಂಗ್ರಾಹಕ:

ಕುಡ್ಪಿ ವಾಸುದೇವ ಶೆಣೈ,

ಮಂಗಳೂರು.

1957.

ಒಂದಾಣೆ ಮಾಲೆ

ಆರೋಗ್ಯ ಮತ್ತು ಸೌಂದರ್ಯಕ್ಕೆ

ಮೈಸೂರು ಸ್ಯಾಂಡಲ್ ಸೋಪನ್ನೇ

ಯಾವಾಗಲೂ ಉಪಯೋಗಿಸಿರಿ.

*

ಎಲ್ಲಾ ಕಡೆಗಳಲ್ಲೂ ದೊರೆಯುತ್ತೆ.

*

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ

ರಾಜಾಜಿ ನಗರ, ಬೆಂಗಳೂರು.

ಇಸೋಫನ ಕಥೆಗಳು

ಇಸೋಫನು ಯಾರು?

ಇಸೋಫನ ನೀತಿಕಥೆಗಳು ವಿಶ್ವವಿಖ್ಯಾತವಾಗಿವೆ; ಜಗತ್ತಿನ ಹಲವು ಭಾಷೆಗಳಿಗೆ ಪರಿವರ್ತಿತವಾಗಿವೆ.

ಇಸೋಫನು ಗ್ರೀಸ್ ದೇಶದವನು. ಫ್ರಿಂಯಿಜಿಯಾ (Phrygia) ಎಂಬಲ್ಲಿ ಇವನ ಜನನ. ಕೆಲಕಾಲ ಇವನು ಸಾಮೊ (Samos) ಎಂಬಲ್ಲಿ ಗುಲಾಮನಾಗಿದ್ದನು. ಮತ್ತೆ ಬಿಡುಗಡೆಹೊಂದಿ, ಲಿಡಿಯಕ್ಕೆ ತೆರಳಿ, ಅಲ್ಲಿಯ ಅರಸರಲ್ಲಿ ಕೊನೆಯವನಾದ ಕ್ರೊಯಿಸಸನಲ್ಲಿ ಕೆಲಸಕ್ಕಿದ್ದನು (ಕ್ರಿ. ಪೂ. ೬ನೇ ಶತಮಾನ). ಇಸೋಫನು ಡೆಲ್ಫಿ ಎಂಬಲ್ಲಿಗೆ ಹೋದಾಗ ಆಡಿದ ಕೆಲವು ಮಾತುಗಳು ಧರ್ಮಗುರುಗಳನ್ನು ನೋಯಿಸಿದುವೆಂದೂ, ಆ ಕಾರಣ ಅವನು ಕೊಲ್ಲಲ್ಪಟ್ಟನೆಂದೂ ಇತಿಹಾಸ ಹೇಳುತ್ತದೆ. ಇಸೋಫನು ಸೇವೆ ಸಲಿಸಿದ ಅರಸು ಕ್ರೊಯಿಸಸನು ಆ ಕಾಲದಲ್ಲಿ ಖ್ಯಾತ ಶ್ರೀಮಂತನು. ಕ್ರೊಯಿಸಸನ ಸಂಪತ್ತು ಗಾದೆಯ ಮಾತಾಗಿ ಹೋಗಿದೆ.

ಇಸೋಫನು ಒಳ್ಳೆಯ ರಸಿಕನಾಗಿದ್ದನು. ಚತುರೋಕ್ತಿಗಳಿಗೆ ಹೆಸರಾಗಿದ್ದನು. ಅವನ ಕತೆಗಳೆಂದು ಹೇಳಲಾಗುವ ಕಥೆಗಳೆಲ್ಲವೂ ಅವನ ರಚನೆಯೇ ಎನ್ನಬರುವುದಿಲ್ಲ. ಅವನಿಗಿಂತ ಹಿಂದಿನಿಂದಲೂ ರೂಢಿಯಾಗಿ ಬಂದ ಕೆಲವು ಕತೆಗಳನ್ನೂ ಅವನು ಸಂಗ್ರಹಿಸಿರುವನೆನ್ನುವರು.

ಪ್ರಸ್ತುತ ಸಂಗ್ರಹದಲ್ಲಿ ಇಸೋಫನ ಕೆಲವೇ ಕಥೆಗಳನ್ನು ಆಯ್ದು ಕೊಡಲಾಗಿದೆ. ಮುಂದೆ ಕೆಲವು ಭಾಗಗಳಲ್ಲಿ ಹೆಚ್ಚಿನ ಕಥೆಗಳನ್ನು ಸಂಗ್ರಹಿಸಿ ಕೊಡುವೆವು.

ಕುಡ್ಪಿ ವಾಸುದೇವ ಶೆಣೈ.

೧. ಮರಗಳು ಮತ್ತು ಕೊಡಲಿ

ಒಬ್ಬ ಮನುಷ್ಯನು, ದಟ್ಟವಾಗಿ ಮರಗಳು ಬೆಳೆದಿದ್ದ ಒಂದು ಕಾಡಿಗೆ ಹೋಗಿ, ಸುತ್ತುಮುತ್ತಲೂ ನೋಡುತ್ತ, ತುಸು ಮುಂದರಿದು ಮತ್ತೆ ನಿಂತು ಅನಿಶ್ಚಿತವಾಗಿ ಇರಲು, ಅಲ್ಲಿಯ ಮರಗಳು ಈ ಹೊಸ ಅತಿಥಿಯನ್ನು ಕಂಡು, "ಏನನ್ನು ನೋಡುತ್ತಿರುವೆ?"—ಎಂದು ಪ್ರಶ್ನಿಸಿದುವು. ಮನುಷ್ಯನ ಮುಖವು ಭರವಸೆ ಪಡೆದಂತೆ ಅರಳಿತು. "ವೃಕ್ಷಗಳೇ! ನಿಮ್ಮ ಪ್ರಶ್ನೆಯಿಂದ ಆನಂದಿತನಾದೆನು. ನೀವೆಲ್ಲ ಬಹು ಒಳ್ಳೆಯವರು. ನೋಡಿ, ನನ್ನ ಕೊಡಲಿಗೆ ಕಾವು (ಹಿಡಿ) ಮಾಡಿಸಬೇಕಾಗಿದೆ. ಅದಕ್ಕಾಗಿ ಒಂದು ತುಂಡು ಮರ ಬೇಕು" ಎಂದನು.

ಮರಗಳು ತಂತಮ್ಮೊಳಗೇ ಮಾತಾಡಿಕೊಳ್ಳಲಾರಂಭಿಸಿದುವು. "ಬಹಳ ಅಲ್ಪ ವಸ್ತುವೊಂದನ್ನು ಈತನು ಕೇಳುತ್ತಿರುವನು. ಪಾಪ, ಒಂದು ತುಂಡು ಕೊಟ್ಟುಬಿಡೋಣ" ಎಂದು, ಯಾವ ಮುಂದಾಲೋಚನೆಯೂ ಇಲ್ಲದೆ ಕೇವಲ ಅವನಿಗೆ ಉಪಕಾರಮಾಡುವ ಆತುರದಿಂದ, ತಮ್ಮಲ್ಲಿ ವಿಶೇಷ ಉಪಯೋಗಕರವಲ್ಲದ ಹುಣಸೆಮರದ ಒಂದು ತುಂಡನ್ನು ಅವನಿಗೆ ಕೊಡುವುದೆಂದು ನಿಶ್ಚಯಿಸಿದುವು; ಕೊಟ್ಟುವು. ಆ ಮನುಷ್ಯನು, ವೃಕ್ಷಗಳ ಔದಾರ್ಯಕ್ಕೆ ವಂದಿಸಿ, ಅಲ್ಲಿಂದ ತೆರಳಿ, ತಾನು ತಂದ ಮರದ ತುಂಡಿನಿಂದ ಅದಕ್ಕೆ ಕಾವು ಮಾಡಿಸಿದನು; ಮತ್ತು ಕೆಲವೇ ದಿನಗಳಲ್ಲಿ ಅದೇ ಕಾಡಿಗೆ ಬಂದು, ತನಗೆ ಇಚ್ಛೆಕಂಡಂತೆ ಅದರಿಂದ ಮರಗಳನ್ನು ಕಡಿಯಲಾರಂಭಿಸಿದನು. ಮರಗಳು ಕಂಗಾಲಾದುವು. ಆದರೆ ನಿಸ್ಸಹಾಯ ಸ್ಥಿತಿಯಲ್ಲಿದ್ದುವು. ಒಂದು ಹಳೇ ಮರವು ಇನ್ನೊಂದರೊಡನೆ ಹೇಳಿತು: "ನಮ್ಮ ಮೊದಲನೇ ಹಜ್ಜೆಯೇ ನಮ್ಮ ಸರ್ವನಾಶವನ್ನು ತಂದಿತು. ನಾವು, ಆ ಹುಣಸೆಮರದ ತುಂಡನ್ನು ತ್ಯಾಗಮಾಡಬಹುದೆಂದೆಣಿಸಿ, ಬಲಿಕೊಟ್ಟೆವು. ಈಗ ನಮ್ಮನ್ನೇ ಆ ಕಾವು ಬಲಿತೆಗೆದುಕೊಳ್ಳುತ್ತಿದೆ. ಆ ಹುಣಸೆಮರದ ಹಕ್ಕುಬಾಧ್ಯತೆಗಳನ್ನು ನಾವು ಎತ್ತಿಹಿಡಿದಿದ್ದರೆ, ನಮ್ಮದನ್ನೂ ಕಾಯ್ದುಕೊಳ್ಳಬಹುದಾಗಿತ್ತು"—ಎಂದು ಮರುಗಿದುವು.

(ಪರೋಪಕಾರ ಮಾಡುವಾಗಲೂ ಆಳವಾಗಿ ಯೋಚಿಸಬೇಕಾಗುತ್ತದೆ. "ಪಾತ್ರವರಿತು ದಾನಮಾಡು" ಎಂದೂ ಹಿರಿಯರು ಹೇಳುವರು. ಅದರಂತೇ ದಾನಮಾಡುವ ಆತುರದಲ್ಲಿ, ತನ್ನವರನ್ನೆ ಬಲಿಕೊಡುವಂಥದ್ದು

ದಾನವೆನಿಸಲಾರದು. ಹುಣಸೆಮರದ ಹಕ್ಕುಬಾಧ್ಯತೆಗಳನ್ನು ಇತರ ಮರಗಳು ಅಲಕ್ಷಿಸಿದುವು ತಾವೇ ಶ್ರೇಷ್ಠರು—ಹುಣಸೆಮರದ ತುಂಡು ಅಷ್ಟೊಂದು ವಿಶೇಷವಲ್ಲ—ಎಂದು ಭಾವಿಸಿದುವು. ಮರದ ತುಂಡನ್ನು ಕೊಡಲಿಯ ಕಾವಿಗೆ ಅವನು ಕೇಳಿ ಒಯ್ದರೆ, ಆ ಕೊಡಲಿಯಿಂದ ಇತರ ಮರಗಳನ್ನೆ ಕಡಿಯುವನು ಎಂದು ಆ ಮೂರ್ಖ ಮರಗಳು ಆ ವೇಳೆಯಲ್ಲಿ ಗ್ರಹಿಸಲಾರದೆ ಹೋದುವು "ಕೊಡಲಿ ಕಾವು ಕುಲಕ್ಕೆ ಮೃತ್ಯು" ಎಂದು ಕನ್ನಡ ಗಾದೆ ಇದೆ.)

೨. ತಾಯಿ ಮತ್ತು ತೋಳ

ಹಸಿದಿರುವ ತೋಳವೊಂದು, ಬೆಳಗ್ಗೆ, ಆಹಾರವನ್ನು ಹುಡುಕುತ್ತ ಬರುತ್ತಿರಲು, ಒಂದು ಗುಡಿಸಲಿನ ಬಳಿಗೆ ತಲಪಿದಾಗ, ಒಳಗಿನಿಂದ ಗೃಹಿಣಿಯು, ತನ್ನ ಮಗುವಿಗೆ, "ಅಳುವುದನ್ನು ನಿಲ್ಲಿಸದಿದ್ದರೆ ನಿನ್ನನ್ನು ಕಿಟಕಿಯ ಹೊರಗೆ ಬಿಸಾಡುವೆನು—ನಿನ್ನನ್ನು ತೋಳವು ತಿನ್ನುವುದು" ಎಂದು ಗದರಿಸುತ್ತಿರುವುದನ್ನು ಕೇಳಿತು. ಹಸಿದ ತೋಳಕ್ಕೆ ಆಸೆಯುಂಟಾಯಿತು. ಆ ಹೆಂಗುಸು ಈಗಲೋ ಇನ್ನೊಂದು ಗಳಿಗೆಯಲ್ಲೋ ಆ ಮಗುವನ್ನು ಹೊರಗೆ ಬಿಸುಡುವಳು. ತಾನು ತಿಂದು ಬಾಯಿ ಚಪ್ಪರಿಸುವೆನು!" ಎಂದು ನೆನಸಿ, ಹೊರಗೆ ಕಾಯುತ್ತ ಕುಳಿತುಕೊಂಡಿತು. ಮಧ್ಯಾಹ್ನವಾಯಿತು, ಸಾಯಂಕಾಲವಾಯಿತು. ಆದರೆ, ತಾಯಿಯು ಮಗುವನ್ನು ಹೊರಗೆ ಬಿಸಾಡಲಿಲ್ಲ. ಸಾಯಂಕಾಲ ಅದೇ ಹೆಂಗುಸು, ತನ್ನ ಮಗುವನ್ನು ಮುದ್ದಾಡುತ್ತಾ, "ನನ್ನ ಮುದ್ದು! ನೀನೀಗ ಅಳುವುದಿಲ್ಲ. ನಾನು ನನ್ನ ಮುದ್ದುವನ್ನು ಹೊರಗೆ ಬಿಸಾಡುವವಳೇ? ತೋಳ ಬಂದರೆ ನಾವು ಅದನ್ನು ತಲೆ ಬಡಿದು ಕೊಂದು ಹಾಕದೆ ಬಿಡುವೆವೇ?" ಎಂದು ಲಲ್ಲೆಯಾಡುತ್ತ, ಮಗುವಿಗೆ ಮುದ್ದಿಡುತಿದ್ದುದನ್ನು ಕೇಳಿತು; ಆ ಕೂಡಲೇ ಜೋಲು ಮೋರೆ ಹಾಕಿ, ಅಲ್ಲಿಂದ ತನ್ನ ಮನೆಯ ಕಡೆಗೆ ಹೋಯಿತು. ಮನೆಗೆ ತಲಪುತ್ತಲೇ ಹೆಣ್ಣು ತೋಳವು ತನ್ನ ಗಂಡಿನೊಡನೆ ಕೇಳಿತು—"ಏನು, ಯಾವಾಗಲೂ ನೀನು ಆಹಾರ ತಿಂದೇ ಮನೆಗೆ ಬರುತಿದ್ದಿ. ಈ ದಿನ ಉಪವಾಸವಿದ್ದೇ ಮರಳಿದಂತೆ ಕಾಣುತ್ತದೆ; ದಣಿದಿರುವೆ! ಏಕೆ?" ಅದಕ್ಕೆ ಗಂಡು ತೋಳ ಹೇಳಿತು: "ಏಕೆಂದರೆ, ನಾನು ಒಬ್ಬಳು ಹೆಂಗುಸಿನ ಮಾತುಗಳನ್ನು ನಂಬಿದೆ!"

[ಸ್ತ್ರೀಯು ವಿಶ್ವಾಸಾರ್ಹಳಲ್ಲ— ಎಂಬುದಕ್ಕೆ ಇಸೋಫನು ವ್ಯಂಗ್ಯವಾಗಿ ಈ ಕತೆ ಹೇಳಿರುವನು ಎಂದು ಎಣಿಸಬಾರದು. ಹಸಿದಿರುವವರು ತಮ್ಮ ಹೊಟ್ಟೆ ತುಂಬಿಸಿಕೊಳ್ಳುವ ಆಸೆಯಿಂದ ಏನನ್ನಾದರೂ ನಂಬುವಷ್ಟಕ್ಕೆ ಅವರ ಬುದ್ಧಿಯು ಮಸಕಾಗುತ್ತದೆ ಎಂಬುದಕ್ಕೆ ಈ ಕತೆ ಹೇಳಲ್ಪಟ್ಟಿದೆ. ಸ್ತ್ರೀಯ ಮೇಲೆ ವ್ಯಂಗ್ಯವಾಡುವುದಿದ್ದರೆ ಇಸೋಫನು, ನಂಬಿ ಮೋಸಹೋದುದು ತೋಳ ಎನ್ನುತ್ತಿರಲಿಲ್ಲ. ತೋಳದಂಥ ಹೊಟ್ಟೆಬಾಕರ ಮತ್ತು ದುರಾಶೆಯುವರ ಬಗ್ಗೇ ಈ ವ್ಯಂಗ್ಯವಿದೆ. ದುರಾಶೆಯಿಂದ ಅವರು ಏನನ್ನೂ ನಂಬುತ್ತಾರೆ, ಮತ್ತೆ ಬುದ್ಧಿ ಕಲಿಯುತ್ತಾರೆ ಎಂದೂ ತಾತ್ಪರ್ಯ.]

೩. ದೀಪ

ಅತ್ಯುಜ್ವಲ ಪ್ರಕಾಶದ ದೀಪವೊಂದನ್ನು ಒಬ್ಬನು ತಯಾರಿಸಿದನು. ಅದನ್ನು ಉರಿಸಿದನು. ಅದರ ಪ್ರಕಾಶವನ್ನು ಕಂಡು ಆನಂದಿತನಾದನು. ಇತರ ಕೆಲವರೂ ನೋಡಿದರು, ಹೊಗಳಿದರು. ದೀಪ ತಯಾರಿಸಿದವನು ಗರ್ವತಾಳಿದನು. ಇದು, ತಾನೆಣಿಸಿದ್ದಕ್ಕಿಂತ ಉತ್ತಮವೆಂದು ಅವನಿಗನ್ನಿಸಿತು. ಕೊನೆಗೆ, "ಸೂರ್ಯನಿಗಿಂತಲೂ ಇದು ಹೆಚ್ಚು ಪ್ರಕಾಶ ಕೊಡುತ್ತದೆ!" ಎಂದವನಿಗನ್ನಿಸಿತು; ಹಾಗೆಯೇ ಇತರರೊಡನೆ ಹೇಳಿದನು. ರುಮ್ಮನೆ ಗಾಳಿ ಬೀಸಿತು. ಗಾಳಿಯ ಹೊಡೆತಕ್ಕೆ ದೀಪವು ಒಮ್ಮಿಂದೊಮ್ಮೆ ಆರಿಹೋಯಿತು. ಪೆಚ್ಚು ಮೋರೆ ಹಾಕಿ ಕುಳಿತನು.

[ಮನುಷ್ಯನು ತನ್ನ ಶೋಧನೆಗಳಿಗೆ ಆನಂದಪಡಬಹುದು. ಹಾಗೇ ಕೆಲವೊಂದು ಯಶಸ್ವೀ ಕಾರ್ಯಗಳಿಗೆ, ತನ್ನ ಕೈಲಾದ ಕರ್ತವ್ಯವಾಡಿರುವೆನೆಂಬ ತೃಪ್ತಿಯನ್ನು ಹೊಂದಬಹುದು. ಆದರೆ, ಹೆಚ್ಚಾಗಿ ಇಂಥವರು ತಾವು ಇತರರಿಗಿಂತ ಶ್ರೇಷ್ಠರು ಎಂಬ ಅಹಂಕಾರ ತಾಳುತ್ತಾರೆ, ಕೊನೆಗೆ ದೇವರಿಗಿಂತಲೂ ತಮ್ಮ ಕೆಲಸ ದೊಡ್ಡದು ಎಂದು ಭ್ರಮಿಸುವಷ್ಟು ಮೂರ್ಖರಾಗುತ್ತಾರೆ.]

೪. ಕುರುಬ ಮತ್ತು ತೋಳ

ಕುರುಬನೊಬ್ಬನು ಒಂದು ದಿನ ಕುರಿ ಮೇಯಿಸುತ್ತ ಹೋಗುವಾಗ, ಒಂದು ಕಡೆಯಲ್ಲಿ, ತೋಳದ ಚಿಕ್ಕ ಮರಿಯೊಂದನ್ನು ಕಂಡನು. ನಿರುಪ

ಪ್ರವಿಯಂತೆ ಕಾಣುವ ಆ ಮರಿಯನ್ನು ತೆಗೆದುಕೊಂಡು ಬಂದು, ಸಾಕಿದನು. ಅದು ಸ್ವಲ್ಪ ಬೆಳೆದಾಗ, ಅದಕ್ಕೆ, ಇತರರ ಕುರಿಗಳನ್ನು ಕದಿಯಲು ಕಲಿಸಿದನು. ಆ ತೋಳವು ಯೋಗ್ಯ ಶಿಷ್ಯನಾಯಿತು. ಒಂದು ದಿನ ಆ ಕುರುಬನನ್ನು ಕಂಡು ಅದು ಹೇಳಿತು: "ನೋಡಯ್ಯಾ, ಕುರಿಗಳನ್ನು ಕದಿಯಲು ಕಲಿಸಿದವನು ನೀನು. ಹಾಗೆ ಕಲಿಸಿದ ನಂತರ ಇನ್ನು ನಿನ್ನ ಕುರಿಗಳ ಮೇಲೆ ಸ್ವಲ್ಪ ಕಣ್ಣಿಡು; ಇಲ್ಲದಿದ್ದರೆ ನಿನ್ನದೇ ಕೆಲವು ಕುರಿಗಳು ಕಾಣೆಯಾಗಬಹುದು! ನೀನು ಇಷ್ಟು ಸಮಯ ಸಾಕಿದ್ದಕ್ಕೆ ಇಷ್ಟನ್ನು ಹೇಳಿದ್ದೇನೆ" ಎನ್ನುತ್ತ, ಅವನನ್ನು ಬಿಟ್ಟು ಹೋಯಿತು.

[ದುಷ್ಟಸ್ವಭಾವದವರನ್ನು ತಮ್ಮ ಸ್ವಂತ ಲಾಭದ ದುರಾಶೆಯಿಂದ ಉಪಯೋಗಿಸಿಕೊಂಡವರು ಕೊನೆಗೆ ತಾವೇ ದಂಡ ತೆರಬೇಕಾಗುವುದು. ಯಾರಿಗೂ ಕೆಡುಕು ಬುದ್ಧಿ ಕಲಿಸಬಾರದು.[

೫. ಎರಡು ಗಡಿಗೆಗಳು

ಜಲಸಮೃದ್ಧ ನದಿಯಲ್ಲಿ, ಎರಡು ಗಡಿಗೆಗಳು ತೇಲುತಿದ್ದುವು. ಒಂದು ಗಡಿಗೆ ಮಣ್ಣಿನದು, ಮತ್ತೊಂದು ಹಿತ್ತಾಳಿಯದು. ತೇಲುತ್ತಿದ್ದಂತೆ ಮಣ್ಣಿನ ಗಡಿಗೆಯು ಹಿತ್ತಾಳಿಯ ಗಡಿಗೆಗೆ ಹೇಳಿತು: "ದಯಮಾಡಿ ನೀನು ನನ್ನಿಂದ ಸಾಧ್ಯವಿದ್ದಷ್ಟು ದೂರದಲ್ಲಿ ತೇಲುತ್ತ ಮುಂದುವರಿಯಬೇಕು. ಯಾವ ಕಾಲಕ್ಕೂ ಸಮೀಪಕ್ಕೆ ಬರಬೇಡ. ಏಕೆಂದರೆ, ನೀನು ನನ್ನನ್ನು ಸ್ವಲ್ಪವಾದರೂ—ಮೆಲ್ಲಗೆಯಾದರೂ—ಸ್ಪರ್ಶಿಸಿದ್ದೇ ಆದರೆ ನಾನು ಚೂರು ಚೂರಾಗಿ ಹೋಗುವೆನು. ನಾನಾಗಿ ನಿನ್ನ ಬಳಿಗೆ ಬರಲು ಇಚ್ಛಿಸುವವನಲ್ಲ."

[ಸಮಬಲಿಗಳೂ, ಸಮನಾದ ಬುದ್ಧಿಯುಳ್ಳವರೂ ಜತೆಗಾರರಾಗಿರ ಬಲ್ಲರು. ಅತಿ ಶ್ರೀಮಂತಿಕೆಯವನೊಡನೆ ಅತಿ ಬಡವನು ಸಮಾನತ್ವ ಹೊಂದಲಾರನು; ಬುದ್ಧಿವಂತನೊಡನೆ ಬುದ್ಧಿಯಿಲ್ಲದವನು ಸಮಾನತ್ವ ತೋರಿ ನಡೆಯಲಾರನು.]

೬. ಮಂಗ ಮತ್ತು ನರಿ

ಕಾಡಿನಲ್ಲಿ ಒಮ್ಮೆ ಮೃಗಗಳ ಸಭೆ ಸೇರಿತ್ತು. ತಮ್ಮ ಅರಸನನ್ನು ಆರಿಸಿಕೊಳ್ಳಬೇಕೆಂದು ಸಭೆಯಲ್ಲಿ ಚರ್ಚೆ ನಡೆದಿತ್ತು. ಒಂದು ಮಂಗವು

ಅಧಿಕಾರಲಾಲಸೆಯಿಂದ, ಆ ಮೃಗಗಳಿಗೆ ಮನಸ್ಸಂತೋಷವುಂಟು
ಮಾಡಿಯೇ ತಾನು ಗೆಲ್ಲುವೆನೆಂದೆಣಿಸಿ, ಚೆನ್ನಾಗಿ ಕುಣಿಯಿತು. ಮಂಗದ
ಕುಣಿದಾಟ ನೋಡಿ ನಿಜಕ್ಕೂ ಎಲ್ಲ ಮೃಗಗಳಿಗೆ ಸಂತೋಷವುಂಟಾಯಿತು.
ಮಂಗವೇ ತಮಗೆ ಅರಸನಾಗಬಹುದೆಂದು ಆ ಮೆಚ್ಚುಗೆಯ ಆವೇಶದಲ್ಲಿ
ಆ ಮೃಗಗಳು ಏಕಕಂಠದಿಂದ ಘೋಷಿಸಿದುವು. ಅರಸನಾಗಿ ಪಟ್ಟಾಭಿಷಿಕ್ತ
ವಾದ ಮಂಗದ ಸಂತೋಷಕ್ಕೆ ಪಾರವೇ ಇಲ್ಲ. ಎಲ್ಲ ಕಡೆಗಳಿಂದಲೂ
ಗೌರವಾದರಗಳನ್ನು ಪಡೆದು, ಆ ಮಂಗವು ಹೆಮ್ಮೆಯಿಂದ ಮೆರೆಯುತ್ತಿರು
ವಾಗ, ಅಸೂಯೆಗೊಂಡ ಒಂದು ನರಿಯು, ಮತ್ಸರ ಸಹಿಸಲಾರದೆ, ಆ
ಮಂಗದ ಬಳಿಗೆ ಬಂದು,"ನಮಸ್ತೇ ಮಂಗರಾಜ! ಒಂದುಕಡೆ ರುಚಿಕರವಾದ
ತಿಂಡಿಯಿದೆ. ಅರಸನಾದ ನೀನೇ ಅದನ್ನುಣ್ಣಲು ಯೋಗ್ಯನು. ಬಾ ನನ್ನ
ಜತೆಯಲ್ಲಿ!" ಎಂದಿತು. ಮಂಗವು ಹೆಮ್ಮೆಯಿಂದಲೂ ಸಂತೋಷ
ದಿಂದಲೂ ನರಿಯನ್ನು ಹಿಂಬಾಲಿಸಿತು. ನರಿಯು, ಆ ದಿನವೇ ಒಂದು
ತಿಂಡಿಯ ಚೂರನ್ನಿಟ್ಟ ಬೋನನ್ನು ಕಂಡಿತ್ತು. ಮಂಗವನ್ನು ಆ ಬೋನಿನ
ಬಳಿಗೊಯ್ದು, "ನೋಡು ರಾಜಾ, ಅರಸನಿಗಾಗಿ ಒಳ್ಳೇ ಸ್ವಚ್ಛ ಸ್ಥಳದಲ್ಲಿ,
ಪದ್ಧತಿಯಂತೆ ಬಡಿಸಿಟ್ಟಿದೆ. ಸ್ವೀಕರಿಸುವವನಾಗು!" ಎನ್ನಲು, ಸಂತೋ
ಷದ ಭರದಲ್ಲಿ, ಹಿಂದು ಮುಂದು ನೋಡದೆ, ಸ್ವಲ್ಪವಾದರೂ ತಡೆದು
ಕೊಂಡು ಚಿಂತಿಸದೆ, ಮಂಗವು ಆ ಬೋನಿಗೆ ಕೈಹಾಕಿತು; ಸೆರೆಸಿಕ್ಕಿತು.
ಮಂಗಕ್ಕೆ ಕೂಡಲೇ ನರಿಯ ಮೋಸಕೃತ್ಯ ತಿಳಿದು,"ಏನಯ್ಯಾ ನರಿಯಣ್ಣಾ!
ನಿನಗೇನೂ ಅನ್ಯಾಯಮಾಡಿರದ ನನ್ನನ್ನು ಸಿಕ್ಕಿಸಿಹಾಕಿದೆಯಲ್ಲ ನೀನು!"
ಎಂದು ದೂರಿತು. ಅದಕ್ಕೆ ನರಿಯೆಂದಿತು: "ಮಂಗಣ್ಣಾ, ಎಳ್ಳಷ್ಟು ಬುದ್ಧಿ
ಯಿಲ್ಲದ ನಿನ್ನೀ ಕಿರಿಯ ಮಂಡೆಯನ್ನು ಆ ಭುಜಗಳ ಮೇಲೆ ಹೊತ್ತು
ಕೊಂಡು ನೀನು, ಮೃಗಗಳ ರಾಜನಾಗಲು ಆಶಿಸುವಿಯಾ? ರಾಜನಾಗಿ
ಬಹುಕಾಲ ಉಳಿಯಬಲ್ಲೆಯಾ?"

[ಅಧಿಕಾರ ಪಡೆವ ಉದ್ದೇಶವಿಟ್ಟುಕೊಂಡು ಯಾರೂ; ಇತರರನ್ನು
ಒಲಿಸಿಕೊಳ್ಳಲು ಯತ್ನಿಸಬಾರದು. ನಲಿದು ಒಲಿಸಿಕೊಳ್ಳಬಾರದು.
ಸಿಂಹವು ಕಾಡಿನಲ್ಲಿ ತಾನಾಗಿ ಕೇಳಿಕೊಂಡು ಮೃಗರಾಜನಾಗಲಿಲ್ಲ. ಸ್ವ
ಪರಾಕ್ರಮದಿಂದಲೇ ಆ ಅರ್ಹತೆಹೊಂದಿತು.]

೭. ಕಾದಾಡಿಕೊಳ್ಳುವ ಕೋಳಿಗಳು ಮತ್ತು ಗಿಡುಗ

ಎರಡು ಕೋಳಿಗಳು, ಅಂಗಳದೊಳಗಿನ ಯಜಮಾನ್ಯಕ್ಕಾಗಿ ಕಾದಾಡಿಕೊಳ್ಳುತಿದ್ದುವು. ಕೆಲಹೊತ್ತಿನ ತನಕ, ಕೊಕ್ಕುಗಳಿಂದ ಕುಕ್ಕುತ್ತಲೂ ಬೆರಳುಗಳಿಂದ ಪರಚುತ್ತಲೂ ಹೋರಾಡಿದವು. ಕೊನೆಗೆ ಒಂದು ಕೋಳಿಯು ಗೆದ್ದಿತು. ಸೋತ ಕೋಳಿಯು ತನ್ನ ಗೂಡಿನೊಳಗೆ ಓಡಿ, ನಾಚಿಕೆಯಿಂದಲೂ ದುಃಖದಿಂದಲೂ ಕುಳಿತುಬಿಟ್ಟಿತು. ಗೆದ್ದ ಕೋಳಿಯು ಗರ್ವದಿಂದ ಹಾರಿ ಎತ್ತರದ ಗೋಡೆಯ ಮೇಲೆ ನಿಂತು, ಕತ್ತನ್ನು ಉಬ್ಬಿಸಿ ಕೊಕ್ಕೊಕ್ಕೋಕೋ ಎಂದು ಕೂಗಾಡಿತು. ಮೇಲೇ ಹಾರಾಡುತಿದ್ದ ದೊಡ್ಡ ಗಿಡುಗವೊಂದು ಇದನ್ನು ಕಂಡು ಬಾಣ ಹೊಡೆದಂತೆ ಕೆಳಗೆ ಹಾರಿ ಬಂದು, ತನ್ನ ಬಲಿಷ್ಠ ಹಾಗೂ ಚೂಪಾದ ಕಾಲುಗಳಿಂದ ಆ ಹೆಮ್ಮೆಯ ಕೋಳಿಯನ್ನು ಹಿಡಿದುಕೊಂಡು ಹಾರಿತು. ಸೋತುಹೋಗಿ ಅವಿತಿದ್ದ ಕೋಳಿಯು ಗೂಡಿನಿಂದ ಹೊರಬಂದು, ಆ ಅಂಗಳದ ಯಜಮಾನನಾಗಿ ಮೆರೆಯಿತು.

[ಹೋರಾಟದಲ್ಲಿ ಗೆದ್ದವನು ಅಹಂಕಾರದಿಂದ ಮೆರೆಯಬಾರದು. ಅಹಂಕಾರವು ಸಾರಾಸಾರ ವಿವೇಕವನ್ನು ನಾಶಮಾಡಿಬಿಡುತ್ತದೆ, ಅಹಂಕಾರಿಗೆ ತಿಳಿಯದಂತೇ ವಿಪತ್ತು ಅಕಸ್ಮಿಕವಾಗಿ ಬಂದು, ಅವನನ್ನು ಹೊಡೆದುಕೊಂಡು ಹೋಗುತ್ತದೆ]

೮. ತುಂಟ ನಾಯಿ

ಒಬ್ಬ ಸದ್ಗೃಹಸ್ಥನು, ಒಂದು ನಾಯಿಯನ್ನು ಸಾಕುತಿದ್ದನು. ಮಮತೆಯಿಂದ ಅದಕ್ಕೆ ಬೇಕಾದಷ್ಟು ಆಹಾರ ಕೊಡುತಿದ್ದನು. ಯಜಮಾನನ ಪ್ರೀತಿಯಿಂದ ಆ ನಾಯಿಗೆ ಹೆಮ್ಮೆಯುಂಟಾಯಿತು. ಹೊಟ್ಟೆ ತುಂಬ ಉಂಡು ಮದವೇರಿತು. ಕೊನೆಗೆ ಅದು ತನ್ನ ಯಜಮಾನನ ಸೊತ್ತನ್ನು ಕಾಯುವುದಷ್ಟಕ್ಕೇ ನಿಲ್ಲದೆ, ರಸ್ತೆಯಲ್ಲಿ ಹಾದುಹೋಗುವವರ ಹಿಂದೆ ಸದ್ದಿಲ್ಲದೆ ಓಡಿ ಕಚ್ಚಲಾರಂಭಿಸಿತು. ಹಲವರು ಈ ನಾಯಿಯ ಕುರಿತು ಆ ಯಜಮಾನನಿಗೆ ದೂರಿಟ್ಟರು. ಅವನು ಒಂದು ಗಂಟೆಯನ್ನು

ತಂದು ಅದರ ಕುತ್ತಿಗೆಗೆ ಕಟ್ಟಿದನು. ಅದು ದಾರಿಹೋಕರ ಹಿಂದೆ ಬರು ವಾಗ ಆ ಗಂಟೆಯ ಸದ್ದು ಕೇಳಿ ಅವರು ಜಾಗರೂಕರಾಗಿರಬಹುದೆಂದು ಹಾಗೆ ಮಾಡಿದ್ದನು. ಆ ನಾಯಿಯು, ತನ್ನ ಯಜಮಾನನು ತನಗೆ ಕೊಟ್ಟ ಉಡುಗೊರೆಯೆಂದು ತಿಳಿದು, ರಾಜಠೀವಿಯಿಂದ ಆ ಕೊರಳ ಗಂಟೆಯು ಶಬ್ದ ಮಾಡುತ್ತ ರಸ್ತೆಗೆ ಬಂದು ಇತರ ನಾಯಿಗಳ ಮುಂದೆ ಹೆಮ್ಮೆ ಯಿಂದ ವರ್ತಿಸತೊಡಗಿತು. ಆಗ, ಒಂದು ವಯೋವೃದ್ಧ ಬೇಟೆನಾಯಿಯು, ಈ ಗಂಟೆನಾಯಿಗೆ ಅಂದಿತು: "ಏ ಮರುಳೆ! ಹೆಮ್ಮೆಯಿಂದ ಓಡಾಡಬೇಡ. ಆ ಕೊರಳ ಗಂಟೆಯನ್ನು ನಿನಗೆ ಉಡುಗೊರೆಯು ಆಭರಣವಾಗಿ ಕೊಟ್ಟಿಲ್ಲ. ಅದು ಗೌರವಪಡತಕ್ಕ ವಿಷಯವಲ್ಲ—ಅಪಮಾನದ ಚಿಹ್ನವಾಗಿದೆ. ನೀನು ಹುಚ್ಚಾಬಟ್ಟೆಯಾಗಿ ಸಿಕ್ಕಸಿಕ್ಕವರಿಗೆ ಕಚ್ಚದ ಹಾಗೆ ಎಚ್ಚರಿಕೆಗಾಗಿ ಆ ಗಂಟೆ ಕಟ್ಟಿರುವರು!" ಇದನ್ನು ಕೇಳಿ ಆ ನಾಯಿಯು ನಾಚಿಕೆಯಿಂದ ತಲೆ ಕೆಳಗೆಮಾಡಿ, ಹೊರಟುಹೋಯಿತು.

[ಕೆಟ್ಟ ಹೆಸರು ಬಂದರೆ, ಅದನ್ನು ಕೀರ್ತಿ ಎಂದು ತಪ್ಪು ತಿಳಿವವರು ಹಲವರಿದ್ದಾರೆ. ಹುಚ್ಚಾಟಕ್ಕೂ ಹುಚ್ಚು ಮಾತುಗಳಿಗೂ ಜನರು ನಗು ತಿದ್ದರೆ, ಆ ನಗುವಿನ ನಿಜ ಕಾರಣ ತಿಳಿಯದೆ ಹೆಮ್ಮೆಪಡುವವರಿದ್ದಾರೆ.]

೯. ನರಿ ಮತ್ತು ಮುಖವಾಡ

ಒಂದು ನರಿಯು, ಕಳ್ಳತನದಿಂದ ಓರ್ವ ನಟನ ಮನೆಯೊಳಗೆ ನುಗ್ಗಿ, ಅವನ ಕೊಠಡಿಗೆ ಹೋಯಿತು. ಅಲ್ಲಿ, ರಂಗಭೂಮಿಯ ಅನೇಕ ವಸು ಗಳು ಬಿದ್ದುಕೊಂಡಿದ್ದುವು. ಅವುಗಳಲ್ಲಿ, ಒಂದು ಸುಂದರ ಮುಖವಾಡ ವನ್ನು ನರಿಯು ಕೈಗೆ ತೆಗೆದುಕೊಂಡು, "ಎಷ್ಟು ಸುಂದರ ತಲೆ! ಆದರೆ, ಮಾಡುವುದೇನು? ಇದರೊಳಗೆ ಮಿದುಳು ಮಾತ್ರ ಇಲ್ಲವಲ್ಲ!" ಎನ್ನುತ್ತ, ಅದನ್ನು ಕೆಳಗೆ ಬಿಸುಡಿಬಿಟ್ಟಿತು.

[ಸುಂದರ ಮುಖವಿದ್ದ ಮಾತ್ರಕ್ಕೆ ನಾವು ಜಾಣರೆಂದು ತಿಳಿಯ ಬಾರದು—ಆ ಸುಂದರ ಮುಖವು ನಟನಿಗೆ ಮುಖವಾಡವಿದ್ದಂತೆ ಎಂಬು ದನ್ನು ಇಸೋಫನು ಈ ವ್ಯಂಗ್ಯದಿಂದ ತಿಳಿಸುತ್ತಾನೆ.]

೧೦. ಕುದುರೆ ಮತ್ತು ಜಿಂಕೆ

ಒಂದು ಹುಲ್ಲುಗಾವಲಿನಲ್ಲಿ ಒಂದು ಕುದುರೆಯು, ಅನೇಕ ದಿನಗಳಿಂದ ತಾನೊಬ್ಬನೇ ಮೇಯುತಿತ್ತು. ಆ ಹುಲ್ಲುಗಾವಲು ಬಲು ವಿಶಾಲವಾಗಿದ್ದು, ಆ ಕುದುರೆಯು ಸದಾ ಮೇಯುತಿದ್ದರೂ ಮುಗಿಯದಷ್ಟು ಹುಲ್ಲನ್ನು ಒದಗಿಸುವಂತಿತ್ತು. ಒಂದು ದಿನ, ಒಂದು ಜಿಂಕೆಯು ಹಸಿದು, ಆ ಕಡೆಗೆ ಬಂದು, ಇಷ್ಟು ವಿಶಾಲ ಬಯಲಿನಲ್ಲಿ ಒಂದೇ ಒಂದು ಕುದುರೆ ಮಾತ್ರ ಇದ್ದುದನ್ನು ಕಂಡು, ತಾನೂ ಮೇಯತೊಡಗಿತು. ಕುದುರೆಗೆ, ಈ ಹೊಸ ಪ್ರವೇಶದಿಂದ ಮತ್ಸರ ಉಂಟಾಯಿತು. ದುಸ್ವಾರ್ಥದ ಆ ಕುದುರೆಯು, ಆ ಬಡ ಜಿಂಕೆಯ ಮೇಲೆ ಕೋಪಗೊಂಡಿತು. "ಇಲ್ಲೇಕೆ ಬಂದೆ? ನಡೆಯಾಚೆ!" ಎಂದು ಗದರಿಸಿತು. ಅದಕ್ಕೆ ಆ ಜಿಂಕೆಯು, ವಿನಯದಿಂದ, "ಅಷ್ಟು ಕೋಪವೇಕೆ? ಈ ಹುಲ್ಲುಗಾವಲು ವಿಸ್ತಾರವಾಗಿದೆ. ನಾವಿಬ್ಬರೂ ಎಷ್ಟು ದಿನ ಮೇಯುತಿದ್ದರೂ ಇಲ್ಲಿ ಮೇವು ಕಡಿಮೆಯಾಗಲಾರದು!" ಎಂದಿತು. ಕುದುರೆಗೆ ಏನು ಉತ್ತರ ಹೇಳಬೇಕೋ ತಿಳಿಯಲಿಲ್ಲ. ಆ ಜಿಂಕೆಯನ್ನು ಬೆನ್ನಟ್ಟುವುದೂ ಹೊಡೆವುದೂ ತನ್ನಿಂದ ಸಾಧ್ಯವಿಲ್ಲವೆಂದು ಅದಕ್ಕೆ ಗೊತ್ತು. ಅದಕ್ಕಾಗಿ, ಕುದುರೆಯು ಒಬ್ಬ ಮನುಷ್ಯನನ್ನು ಕಂಡು, "ನೋಡು, ನೀನು ಆ ಜಿಂಕೆಯನ್ನು ಬೇಟೆಯಾಡುವಿಯಾದರೆ, ನಾನು ನಿನಗೆ ಸಹಾಯಕನಾಗುವೆನು!" ಎಂದಿತು. ಮನುಷ್ಯನು "ಸರಿಯೇ, ಆದರೆ ನೀನು ನಿನ್ನ ಬಾಯಿಗೆ ಈ ಲಗಾಮನ್ನು ತುರುಕುವುದಕ್ಕೆ ಸಮ್ಮತಿಸಬೇಕು; ಆ ಮೇಲೆ ನಾನು ಆ ಜಿಂಕೆಯನ್ನು ಹದಕ್ಕೆ ತರಲು ಸುಲಭವಾಗುವುದು" ಎಂದನು. ಕುದುರೆಯು ಸಂತೋಷದಿಂದ ಕೂಡಲೇ ಒಪ್ಪಿತು. ಆದರೆ, ಆ ಮನುಷ್ಯನು ಲಗಾಮು ಹಾಕಿ ಬೆನ್ನಮೇಲೇರಿದ ಕೆಲಹೊತ್ತಿನಲ್ಲೆ ಕುದುರೆಗೆ ಈ ಭಯಂಕರ ಸತ್ಯ ತಿಳಿಯಿತು — ಜಿಂಕೆಯ ಮೇಲೆ ಸೇಡು ತೀರಿಸಿಕೊಳ್ಳುವ ಬದಲು ತಾನು ಮನುಷ್ಯನ ಗುಲಾಮನಾಗಿ ಹೋಗಿರುವೆನು — ಎಂದು.

[ಮತ್ಸರವು ಮತ್ಸರಿಯ ಅಂತರ್ಯವನ್ನು ಕೆಡಿಸುತ್ತದೆ; ದುಸ್ವಾರ್ಥವು ಒಬ್ಬನಿಗೆ ಲಾಭದ ಬದಲು ಶಾಶ್ವತ ನಷ್ಟವುಂಟುಮಾಡುತ್ತದೆ.]

೧೧. ಕುರಿಯ ಚರ್ಮ ಹೊದ್ದುಕೊಂಡ ತೋಳ

ಒಂದು ತೋಳವು, ಒಂದು ಕುರಿಮಂದೆಯನ್ನು ದಿನಾಲೂ ದೂರದಿಂದ ನೋಡಿ, ಜೊಲ್ಲು ಸುರಿಸುತಿತ್ತು. ಆ ಮಂದೆಯನ್ನು ಕಾಯುವ ನಾಯಿಗಳಿದ್ದುವು; ಧೈರ್ಯಶಾಲಿ ಕುರುಬನೂ ಇದ್ದನು. ಎಷ್ಟು ದಿನಗಳಾದರೂ ಒಂದೇ ಒಂದು ಕುರಿಯನ್ನು ಹಿಡಿದು ತಿನ್ನಲು ಆ ತೋಳಕ್ಕೆ ಸಾಧ್ಯವಾಗಲಿಲ್ಲ. ತೋಳವು ಒಂದು ದಿನ ಹೀಗೇ ಯೋಚಿಸಿತು: ತಾನು ಇನ್ನೂ ಕಾಯುವುದರಲ್ಲಿ ಅರ್ಥವಿಲ್ಲ. ಆ ಕುರಿಮಂದೆಯೊಳಗೇ ಇರುವಂತಾದರೆ, ನಿತ್ಯವೂ, ಅನಾಯಾಸವಾಗಿ ಉಂಡುಕೊಂಡಿರಬಹುದು. ಹೀಗೆಂದು ಆಲೋಚಿಸಿ, ಒಂದು ಉಪಾಯವನ್ನೂ ಕಂಡುಕೊಂಡಿತು. ಒಂದು ದೊಡ್ಡ ಕುರಿಯ ಚರ್ಮವನ್ನು ತಾನು ಅಂದವಾಗಿ ಹೊದ್ದುಕೊಂಡಿತು; ಮತ್ತು ಕುರುಬನ ಹಾಗೂ ಮಂದೆನಾಯಿಗಳ ದೃಷ್ಟಿಗೆ ಬೀಳದಂತೆ ಕುರಿಮಂದೆಯೊಳಗೆ ಸೇರಿಬಿಟ್ಟಿತು. ಕುರುಬನು, ಎಂದಿನಂತೇ, ಸಾಯಂಕಾಲವಾಗುತ್ತಲೇ, ಕುರಿಹಿಂಡನ್ನು ಮನೆಗೆ ಸಾಗಿಸಿದನು. ಅವನಿಗೆ, ಮರುದಿನದ ಒಂದು ದೊಡ್ಡ ಭೋಜನಕ್ಕಾಗಿ ಕುರಿಮಾಂಸ ಬೇಕಾಗಿತ್ತು. ಅದಕ್ಕಾಗಿ, ಕತ್ತಲಿರುವಾಗಲೇ ಹಟ್ಟಿ ಕಡೆಗೆ ಹೋಗಿ, ದಪ್ಪ ಬೆಳೆದ ಒಂದು ಕುರಿಯನ್ನು ಹಿಡಿದುಕೊಂಡನು. ಅದು ಕುರಿವೇಷದ ತೋಳವಾಗಿತ್ತು. ಅದನ್ನು ಎಳೆದುತಂದು ಕತ್ತಿಯಿಂದ ಕಡಿದುಬಿಟ್ಟನು.

[ಕೇಡು ಬಗೆವವನಿಗೆ ಕೇಡು ತಪ್ಪದು. ಕೆಲವೊಮ್ಮೆ, ಕಳ್ಳತನ—ಕೇಡುಗಳಿಂದ ತಾತ್ಕಾಲಿಕವಾಗಿ ಲಾಭ ಕಂಡರೂ, ಆ ದೋಷವು ಅವನಿಗೆ ಇಂದಲ್ಲ ನಾಳೆ ಬಂದು ಮರಳಿ ಹೊಡೆವುದು.]

೧೨. ಬೇಸಾಯಗಾರ ಮತ್ತು ಹಾವು

ಒಬ್ಬ ಬೇಸಾಯಗಾರನು, ಮುಂಜಾನೆ ಬಯಲಲ್ಲಿ ನಡೆದು ಬರುತಿದ್ದಾಗ, ಅತೀವ ಚಳಿಯಿಂದ ನಿಶ್ಚೇಷ್ಟಿತವಾಗಿ ಬಿದ್ದಿದ್ದ ಒಂದು ಹಾವನ್ನು ಕಂಡನು. ಅದು ಸತ್ತಿಲ್ಲ, ಚಳಿಯಿಂದ ಮುದ್ದೆಗಟ್ಟಿದಂತಾಗಿದೆ ಎಂದು ಅವನಿಗೆ ತಿಳಿಯಿತು. ಅವನಿಗೆ ಕರುಣೆ ಕಂಡಿತು. ಕೂಡಲೆ ಅದನ್ನೆತ್ತಿಕೊಂಡು ತನ್ನ ಎದೆಗೆ ಅವಚಿಕೊಂಡನು. ಅವನ ಮೈಯು ಶಾಖ

ತಗಲುತ್ತಲೇ ಸರ್ಪದ ಮೈಯಲ್ಲಿ ನೆತ್ತರು ಸಂಚರಿಸಿ, ಅದು ಚೇತರಿಸಿ ಕೊಂಡಿತು; ತಿಳಿವು ಕಂಡೊಡನೆ ತಡಮಾಡದೆ, ತನ್ನನ್ನು ಎತ್ತಿ ಎದೆಯು ಶಾಖಕೊಟ್ಟು ಬದುಕಿಸಿದ ಆ ಬೇಸಾಯಗಾರನನ್ನು ಕಚ್ಚಿ ಬಿಟ್ಟಿತು. ಬೇಸಾಯಗಾರನು, ವಿಷವೇರಿ ಬಿದ್ದು ಬಿಟ್ಟನು. ಪ್ರಾಣೋತ್ಕ್ರಮಣವಾಗುತ್ತಿರಲು ಅವನು ಹೇಳಿದನು: "ನಾನು ನೀಚಜಂತುವಿನ ಮೇಲೆ ಕರುಣೆಗೊಂಡುದಕ್ಕೆ ತಕ್ಕ ಫಲ ದೊರೆಯಿತು"

[ಸ್ವಭಾವತಃ ನೀಚರಿಗೆ ಯಾವ ಮತ್ತು ಎಷ್ಟು ಉಪಕಾರವನ್ನು ಮಾಡಿದರೂ, ಅವರಲ್ಲಿ ಕೃತಜ್ಞತೆ ಉದ್ಭವಿಸಲಾರದು.]

೧೩. ಅತಿಯಾಸೆ

ಒಬ್ಬಳು ಹೆಂಗುಸು, ಒಂದು ಕೋಳಿಯನ್ನು ಸಾಕುತ್ತಿದ್ದಳು. ಆ ಕೋಳಿಯು ಅವಳಿಗೆ ದಿನಕ್ಕೊಂದು ತತ್ತಿಕೊಡುತಿತ್ತು. ಅದನ್ನು ಪಡೆದು ಅವಳು ತೃಪ್ತಳಾಗಿರುತಿದ್ದಳು. ಕೆಲಕಾಲಾನಂತರ, ಅವಳಿಗೆ,–ಒಂದು ತತ್ತಿಗಿಂತ ಎರಡು ತತ್ತಿಗಳು ಹೆಚ್ಚಲ್ಲವೇ? ಆಹಾರ ತಿಂದೇ ಕೋಳಿಯು ಮೊಟ್ಟೆಯಿಡುತ್ತದೆ. ಅದಕ್ಕೆ ತಾನು ಕೊಡುವ ಆಹಾರವನ್ನು ಎರಡರಷ್ಟಕ್ಕೆ ಹೆಚ್ಚಿಸಿದರೆ ಮೊಟ್ಟೆಗಳೂ ಎರಡರಂತೆ ದೊರೆಯುವುದಿಲ್ಲವೇ ಎಂದೆನಿಸಿತು. ಅತಿಯಾಸೆಯ ಆ ಮೂರ್ಖ ಹೆಂಗುಸು, ಮರುದಿನದಿಂದಲೇ ಆ ಕೋಳಿಗೆ ಆ ಮೊದಲಿನ ಎರಡರಷ್ಟು ಆಹಾರ ಕೊಡಲಾರಂಭಿಸಿದಳು. ಕೋಳಿಯು ಸಂತೋಷದಿಂದ ಆಹಾರ ತಿಂದು ದಷ್ಟಪುಷ್ಟ ಬೆಳೆಯತೊಡಗಿತು. ಇದರ ಪರಿಣಾಮವಾಗಿ ಅದು ದಿನಂಪ್ರತಿ ಇಡುತಿದ್ದ ಒಂದು ಮೊಟ್ಟೆಯೂ ಸಹ ನಿಂತುಹೋಯಿತು.

['ಅತಿಯಾಸೆ ಗತಿಗೇಡು' ಎಂಬ ಗಾದೆಮಾತಿದೆ. ಇದು ಪ್ರತಿಯೊಂದಕ್ಕೂ ಅನ್ವಯಿಸುತ್ತದೆ. 'ಅತಿ ಸರ್ವತ್ರ ವರ್ಜಯೇತ್' ಎಂದು ನಮ್ಮ ಪ್ರಾಚೀನ ಶಾಸ್ತ್ರಕಾರರೂ ಹೇಳಿರುತ್ತಾರೆ. ಅತಿಯಾದ ಆಹಾರ, ಅತಿಯಾದ ಉಪವಾಸ, ಅತಿಯಾದ ಮೋಹ, ಅತಿಯಾದ ಲೋಭ, ಅತಿದ್ವೇಷ—ಹೀಗೆ ಪ್ರತಿಯೊಂದೂ 'ಅತಿ'ಯಾದರೆ, ಸರ್ವನಾಶವಾಗುವುದು.]

ಒಂದಾಣೆ ಮಾಲೆಯಲ್ಲಿ
ತಾ. 28—12—57ರ ವರೆಗೆ ಪ್ರಕಟವಾದ ಪುಸ್ತಕಗಳು

೧. ‡ಕೆಪ್ಪಟೆರಾಯ (ವಿನೋದ ಕಥೆ) — ದಿ। ಎಂ. ಎನ್. ಕಾಮತ್.
೨. ನಾರೀಶ್ವರರು (ದ್ವಿ. ಮು.) ಏಕಾಂಕ ಪ್ರಹಸನ — ಶ್ರೀ। ಕುಡ್ಪಿ ವಾಸುದೇವ ಶೆಣೈ.
೩. ಕಳ್ಳನಿಗೆ ಸಂಭಾವನೆ (ದ್ವಿತೀಯ ಮುದ್ರಣ) — ಶ್ರೀ। ಎಲ್. ಎಸ್. ನಾಯಕ.
೪. ‡ಸದ್ರಿ ಸುಬ್ಬ (ಏಕಾಂಕ ಪ್ರಹಸನ) — ದಿ। ಎಂ. ಎನ್. ಕಾಮತ್.
೫. ಅದ್ಭುತ ತ್ಯಾಗ (ದ್ವಿತೀಯ ಮುದ್ರಣ) — ವೈದ್ಯಗುರು ಎಂ. ಆರ್. ಭಟ್.
೬. ‡ಚುನಾವಣೆ ಅರ್ಥಾತ್ ಬನಾವಣೆ (ಏಕಾಂಕ ಪ್ರಹಸನ) ಕುಡ್ಪಿ ವಾಸುದೇವ ಶೆಣೈ.
೭. ‡'ಬೀಡಿ ಸೇದಬೇಡಿ' ಮತ್ತು 'ಆ ಮಗ' (ವಿನೋದ ಕಥೆಗಳು) ದಿ। ಎಂ. ಎನ್.
೮. ‡ಇಂಗ್ಲಿಷ್–ಕನ್ನಡ ಅರ್ಥಕೋಶ (ಭಾರತ ಸಂವಿಧಾನದಿಂದ) [ಕಾಮತ್.
೯. ಲಂಚಕೆ ಸಂಚಕಾರ (ದ್ವಿತೀಯ ಮುದ್ರಣ) — ಡಾ। ಎಸ್. ಪಿ. ಭಟ್.
೧೦. ಟಿಶ್ಯೂ ಔಷಧಿಗಳ ಕೈಪಿಡಿ (ದ್ವಿ. ಮುದ್ರಣ) ಶ್ರೀ। ಪಿ. ಎಸ್. ವೆಂಕಟಕೃಷ್ಣರಾವ್.
೧೧. ಶ್ರೀಕ್ಷೇತ್ರ ಧರ್ಮಸ್ಥಳ (ಐದನೇ ಮುದ್ರಣ)
೧೨. ಜೀವದ ಮೌಲ್ಯ (ದ್ವಿತೀಯ ಮುದ್ರಣ) — ಶ್ರೀ। ಎಲ್. ಎಸ್. ನಾಯಕ.
೧೩. ‡ಸತ್ತವನ ಸೇಡು ಮತ್ತು ಇತರ ಕಥೆಗಳು — ಡಾ। ವಿ. ಆರ್. ಭಟ್.
೧೪. ‡"ವೆಂಕಟನ ಸಂಕಟ" (ಏಕಾಂಕ ಪ್ರಹಸನ) ಮತ್ತು ಎರಡು ಕಥೆಗಳು
೧೫. ಬಾಬಿಗೆ ಬಾಸಿಂಗ (ದ್ವಿ. ಮು.) ಏಕಾಂಕ ಪ್ರಹಸನ ಶ್ರೀ। ಕುಡ್ಪಿ ವಾಸುದೇವ ಶೆಣೈ.
೧೬. ವೇಣೂರಿನ ಗತವೈಭವ (ದ್ವಿ. ಮುದ್ರಣ) ದಿ। ಪಂಡಿತ ಲೋಕನಾಥ ಶಾಸ್ತ್ರಿಗಳು.
೧೭. ಒಗಟುಗಳು (ದ್ವಿತೀಯ ಮುದ್ರಣ) — ಶ್ರೀ। ಟಿ. ಚಂದ್ರರಾಜ ಸೆಟ್ಟಿ.
೧೮. ಜಗಳಗಂಟಿ ಮತ್ತು ಇತರ ಕಥೆಗಳು (ದ್ವಿ. ಮು.) ವೈದ್ಯಗುರು ಎಂ. ಆರ್. ಭಟ್.
೧೯. ರಥೋತ್ಸವ.
೨೦. ‡ಕರಿನಾಯಿ ಮತ್ತು ಮುಪ್ಪು — ದಿ। ಎಂ. ಎನ್. ಕಾಮತ್.
೨೧. ಭಾರತದ ಮಹಾನಗರಗಳು (ದ್ವಿ. ಮುದ್ರಣ) — ಶ್ರೀ। ಟಿ. ಚಂದ್ರರಾಜ ಸೆಟ್ಟಿ.
೨೨. ತಿರುಕ್ಕುರಲ್ (ದ್ವಿತೀಯ ಮುದ್ರಣ) ಶ್ರೀ। ಡಿ. ಪುಟ್ಟಸ್ವಾಮಿ, ಎಡ್ವೊಕೇಟ್.
೨೩. ಸೂರ್ಯನ ಸಂಸಾರ ಮತ್ತು ಇತರ ಕಥೆಗಳು (ದ್ವಿ. ಮು.) ಶ್ರೀ। ಬಿ. ಶಂಕರ ಭಟ್.
೨೪. ಭಾರತದ ಮಹಾನಗರಗಳು (ದ್ವಿತೀಯ ಮುದ್ರಣ) ಶ್ರೀ। ಟಿ. ಚಂದ್ರರಾಜ ಸೆಟ್ಟಿ.
೨೫. ಧೈರ್ಯ ಮತ್ತು ಇತರ ಸತ್ಯ ಕಥಾನಕಗಳು — ಶ್ರೀ। ಎಲ್. ಎಸ್. ನಾಯಕ.
೨೬. ಮಾ[illegible]ರ (ದ್ವಿತೀಯ ಮುದ್ರಣ) — ಶ್ರೀ। ಜಿ. ಆರ್. ಪಾಂಡೇಶ್ವರ.
೨೭. ಹಾಸವಿಲಾಸ [ದ್ವಿ. ಮು.] — ಶ್ರೀ। ಕುಡ್ಪಿ ವಾಸುದೇವ ಶೆಣೈ.
೨೮. ಸತ್ಯವಂತ ಬಾಬಿ [ದ್ವಿ. ಮು.] ಏಕಾಂಕ ಪ್ರಹಸನ ಶ್ರೀ। ಕುಡ್ಪಿ ವಾಸುದೇವ ಶೆಣೈ.
೨೯. ಜಾಣ್ಮೆಯ ಒಗಟುಗಳು — ಡಾ। ಎಸ್. ಪಿ. ಭಟ್.
೩೦. ಜಾತಕ ಕಥೆಗಳು [ದ್ವಿ. ಮು.] — ಶ್ರೀ। ಎಂ. ಸುಬ್ರಾಯನ್.
೩೧. ಕಾರ್ಕಳದ ಚರಿತ್ರೆ — ಶ್ರೀ। ಡಿ. ಪುಟ್ಟಸ್ವಾಮಿ, ಎಡ್ವೊಕೇಟ್.
೩೨. ಮುರ್ಜಿ [ಏಕಾಂಕ ಪ್ರಹಸನ] — ದಿ। ಎಂ. ಎನ್. ಕಾಮತ್.
೩೩. ದರ್ಶನದ ಕಥೆಗಳು — ಶ್ರೀ। ಬಿ. ಶಂಕರ ಭಟ್ಟ ಮತ್ತು ಶ್ರೀ। ಬಿ. ಎಂ. ಶರ್ಮಾ.

೩೪. ಆಳುವಿನ ಹೊಳೆ ಮತ್ತು ಕೇಶವಭೂಪ [ಮಕ್ಕಳ ಕಥೆಗಳು] "ನವಗಿರಿನಂದ."
೩೫. ಶರಾಬಿನ ಪೀಪಾಯಿಗಳು ಶ್ರೀ। ಬಳ್ಳಾರು ಸುಬ್ರಾಯ ಅಡಿಗ.
೩೬. ಗುಮಾನಿಕವಿಯ ಉಪದೇಶ ಶತಕ ಶ್ರೀ। ಅಮ್ಮೆಂಬಳ ಅನಂತಯ್ಯ ನಾವಡ.
೩೭. ನಿಮಗೆ ಗೊತ್ತಿದೆಯೇ? (ದ್ವಿತೀಯ ಮುದ್ರಣ) ಶ್ರೀ। ಟಿ. ಚಂದ್ರರಾಜ ಸೆಟ್ಟಿ.
೩೮. ಚತುರ ಚಮತ್ಕಾರ ಡಾ। ಎಸ್. ಪಿ. ಭಟ್.
೩೯. ಸತೀ ಸಾವಿತ್ರಿ [ಏಕಾಂಕ ನಾಟಕ] ಶ್ರೀ। ಪಿ. ವೆಂಕಟರಮಣ ಭಟ್ಟ.
೪೦. ಆಭರಣಗಳ ಪೆಟ್ಟಿಗೆ ಮತ್ತು ಇತರ ಕಥೆಗಳು. ಶ್ರೀ। ಬಳ್ಳಾರು ಸುಬ್ರಾಯ ಅಡಿಗ.
೪೧. ಭಾರತದ ಮಂತ್ರಿಮಂಡಲಗಳು. (ತೃತೀಯ ಮುದ್ರಣ.)
೪೨. ಕಾಲುಬಳೆಯ ಕತೆ ಶ್ರೀಮತಿ ಬಿ. ಎಸ್. ರತ್ನಮ್ಮ.
೪೩. ಭಾರತದ ನಾಲ್ಕು ಕಲಶಗಳು (ದ್ವಿ. ಮುದ್ರಣ) ಶ್ರೀ। ಟಿ. ಚಂದ್ರರಾಜ ಸೆಟ್ಟಿ.
೪೪. ವ್ಯಸನದಿಂದ ಲಾಭ ಮತ್ತು ಇತರ ಕಥೆಗಳು ಶ್ರೀ। ಎಲ್. ಎಸ್. ನಾಯಕ.
೪೫. ಸುಭಾಷಿತ (ನೀತಿವಚನಗಳು) [ದ್ವಿ.ಮು.] ಶ್ರೀ। ಎಂ. ಸುಬ್ರಾಯನ್, ವಿದ್ವಾನ್.
೪೬. ೧೮೫೭ರ "ಸಿಪಾಯಿದಂಗೆ" ಶ್ರೀ। ಸುಭಾಷ್ಚಂದ್ರ ಶೆಣೈ, ಬದಿಯಡ್ಕ.
೪೭. ಆಕಾಂಡತಾಂಡವ (ರೇಡಿಯೋ ನಾಟಕ) ಶ್ರೀ। ಬಿ. ದಾಮೋದರ ಬಾಳಿಗ, ಬಿ.ಎ.
೪೮. ಸಾಹಸದ ಕಥೆಗಳು ಶ್ರೀ। ಕುಡ್ಪಿ ವಾಸುದೇವ ಶೆಣೈ.
೪೯. ಸಂಜ್ಞಾ ಜ್ಞಾನಕೋಶ (ಪ್ರಥಮ ಭಾಗ) ಡಾ। ಎಸ್. ಪಿ. ಭಟ್.
೫೦. ಪಂಡಿತನ ಪಿಟೀಲು ಶ್ರೀ। ಕುಡ್ಪಿ ವಾಸುದೇವ ಶೆಣೈ.
೫೧. ಭೋಗಯಾತ್ರೆ (ಆಚಾರ್ಯ ವಿನೋಬಾಭಾವೆ) ಶ್ರೀ। ಎಲ್. ಎಸ್. ನಾಯಕ.
೫೨. ಸಂಗ್ರಾಮಸಿಂಹ (ಐತಿಹಾಸಿಕ ಕಥನ) ಶ್ರೀ। ಅ. ಗೌ. ಕಿನ್ನಿಗೋಳಿ ವಿದ್ವಾನ್.
೫೩. ಧರ್ಮ ಶಿಕ್ಷಾ ಶ್ರೀ। ಕೋ. ಶ. ಕಾಂತ, ಬಿ.ಎ., ಬಿ.ಎಲ್., ಎಡ್ವೊಕೇಟ್.
೫೪. ಮಹಾತ್ಮ (ಪೂಜ್ಯ ಬಾಪೂಜಿ) ಶ್ರೀ। ಎಲ್. ಎಸ್. ನಾಯಕ್.
೫೫. ಮೀರಾಬಾಯಿ (ಏಕಾಂಕ ನಾಟಕ) ಶ್ರೀ। ಸಂ. ಜ. ರಾವ್.
೫೬. ವೀರರಮಣಿ ಕರ್ಮದೇವಿ ಶ್ರೀ। ಕೆ. ಎಸ್. ಶರ್ಮಾ, ವಿದ್ವಾನ್.
೫೭. ಅರಳಿದ ನಗು ಶ್ರೀ। ಬಳ್ಳಾರು ಸುಬ್ರಾಯ ಅಡಿಗ, ವಿದ್ವಾನ್.
೫೮. ಸಚಿತ್ರ ಜಪಾನ್ ಶ್ರೀ। ಟಿ. ರಮೇಶ ಪೈ.
೫೯. ಚುಟ್ಟಬಿಟ್ಟದಿಟ್ಟ (ಏಕಾಂಕ ಪ್ರಹಸನ) ಡಾ। ಎಸ್. ಪಿ. ಭಟ್.
೬೦. ನಿರಪರಾಧಿ ಶ್ರೀ। ಎಲ್. ಎಸ್. ನಾಯಕ್.
೬೧. ಭಕ್ತವಾಣಿ ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈ.
೬೨. ಜಾನಪದ ಸಾಹಿತ್ಯ ಶ್ರೀ। ಪಡಾರು ಮಹಾಬಲೇಶ್ವರ ಭಟ್.
೬೩. ಡಾಕ್ಟರ್ ಆರೋಗ್ಯಮ್ ಶ್ರೀ। ಕೆ. ಎನ್. ಭಟ್, ಶಿರಾಡಿಪಾಲ್.
೬೪. ಲೌಕಿಕ ನ್ಯಾಯಗಳು ಶ್ರೀ। ಕೆ. ಎಲ್. ಎನ್. ಉಪಾಧ್ಯಾಯ.
೬೫. ಶಿಶುಪಾಲ ಮಾನಭಂಗ ಶ್ರೀ। ಕೆ. ಸುಭಾಷಚಂದ್ರ ಶೆಣೈ, ಬದಿಯಡ್ಕ.
೬೬. ಜರಾಸಂಧ ವಧೆ (ಏಕಾಂಕ) ಶ್ರೀ। ಎ. ವಿ. ಮಯ್ಯ, ಬಂಟ್ವಾಳ.
೬೭. ಪ್ರಧಾನಾಮಾತ್ಯ ಪಂಡಿತ ಜವಾಹರಲಾಲ ನೆಹರು ಶ್ರೀ। ಕುಡ್ಪಿ ವಾಸುದೇವ ಶೆಣೈ.
೬೮. ಕರುಣೆ ಮತ್ತು ಇತರ ಕಥೆಗಳು ಶ್ರೀ। ಬಳ್ಳಾರು ಸುಬ್ರಾಯ ಅಡಿಗ.

೬೯. ಶ್ರೀಕ್ಷೇತ್ರ ಉಡುಪಿ [ದ್ವಿ. ಮು.] ಶ್ರೀ। ಕೆ. ಪ್ರಭಾಕರ ರಾವ್.
೭೦. ವಿನೋದ ವಿಹಾರ —(ಆರಿಸಿ ತೆಗೆದ ನಗೆಹನಿಗಳು)
೭೧. ಭಾರತದ ಗತವೈಭವ ಶ್ರೀ। ಟಿ. ಚಂದ್ರರಾಜ ಸೆಟ್ಟಿ.
೭೨. ಸತ್ಯ ಹರಿಶ್ಚಂದ್ರ (ದ್ವಿತೀಯ ಮುದ್ರಣ) ಶ್ರೀ। ಪಿ. ವೆಂಕಟ್ರಮಣ ಭಟ್ಟ.
೭೩. ಸೂಕ್ತಿಗಳು ಶ್ರೀ। ಕೆ. ವೆಂಕಟರಾಯಾಚಾರ್ಯ.
೭೪. ಯಕ್ಷಗಾನ ಕಲಾವಿದರು (ನಟರ ಪರಿಚಯ) ಶ್ರೀ। ವಿಘ್ನೇಶ್ವರ ಶರ್ಮಾ ತದ್ದಲಸೆ
೭೫. ದೇವರ ಸಾಮ್ರಾಜ್ಯದಲ್ಲಿ ಮತ್ತು ಇತರ ಕಥೆಗಳು ಶ್ರೀ। ಎಸ್. ಎನ್. ನವಕಾನ.
೭೬. ಕ್ರಾಂತಿಕಂಠೀರವ ಭಗತ್ ಸಿಂಘ ಶ್ರೀ। ಸತ್ಯಾಶ್ರಯ ಕಾಮತ್.
೭೭. ಜಾತಕಪಠನ ಮತ್ತು ಇತರ ಕಥೆಗಳು ಶ್ರೀ। ಕುಡ್ಪಿ ವಾಸುದೇವ ಶೆಣೈ.
೭೮. ಅಮೃತವಾಣಿ (ಲೋಕನಾಯಕರ ವಚನಗಳು) ಶ್ರೀ। ಎಮ್. ಶ್ರೀಧರ ಕಿಣಿ.
೭೯. ಮಾಯಾಮೃಗ (ಏಕಾಂಕ ನಾಟಕ) ಶ್ರೀ। ಎ. ವಿ. ಮಯ್ಯ.
೮೦. ಡಾಕ್ಟರ್ ಗಾಂಧೀಜಿ ಶ್ರೀ। ಮರಕ್ಕಿಣಿ ಶಂಕರನಾರಾಯಣ ಭಟ್.
೮೧. ಶ್ರೀಶಂಕರಾಚಾರ್ಯರ ಜೀವನಚರಿತ್ರೆ(ತೃ. ಮು.) ಡಾ। ಪಿ. ಎಸ್. ವಾಸುದೇವ ಶರ್ಮ.
೮೨. " ವಿರಚಿತ ಸ್ತೋತ್ರಗಳು " " "
೮೩. ಬೆಡಗಿನ ನಾಡು—ಕೊಡಗು: ಶ್ರೀ। ಶ್ರೀಪತಿರಾವ್ ಫಲಿಮಾರ್ಕರ್, ಬಿ. ಎ, ಬಿ. ಟಿ.
೮೪. ಆನೆಯ ಚಿಪ್ಪು ಮತ್ತು ಇತರ ಸತ್ಯಕಥೆಗಳು. ಶ್ರೀ। ಎಲ್. ಎಸ್. ನಾಯಕ್.
೮೫. ಮಂಗಳೂರಿಂದ ಮಧುರೆಗೆ ಶ್ರೀ। ಟಿ. ಚಂದ್ರರಾಜ ಸೆಟ್ಟಿ.
೮೬. ಸತೀ ವೃಂದಾ (ಏಕಾಂಕ ನಾಟಕ) ಶ್ರೀ। ಕೆ. ಸುಭಾಷ್ಚಂದ್ರ ಶೆಣೈ.
೮೭. ಗೌತಮನ ಗೃಹತ್ಯಾಗ ಮತ್ತು ಸಿದ್ಧಾರ್ಥನ ಕಾರುಣ್ಯ (ಎರಡು ಏಕಾಂಕಗಳು)
೮೮. ಗೃಹವೈದ್ಯ (ದ್ವಿತೀಯ ಮುದ್ರಣ) ಶ್ರೀ। ಬಳ್ಕೂರು ಸುಬ್ರಾಯ ಅಡಿಗ.
೮೯. ನಮ್ಮ ನಾಟಕಗಳು ಶ್ರೀ। ಎಂ. ಎಸ್. ಆಚಾರ್.
೯೦. ಜಾನಪದ ಕಥೆಗಳು ಶ್ರೀ। ಕೆ. ವೆಂಕಟರಾಯಾಚಾರ್ಯ.
೯೧. ಕೆಲವು ಉಪಯುಕ್ತ ಸಲಹೆಗಳು ಶ್ರೀ। ಬಳ್ಕೂರು ಸುಬ್ರಾಯ ಅಡಿಗ.
೯೨. ಅಭಿಜ್ಞಾನ ಶಾಕುಂತಲದಲ್ಲಿ ಲೋಕನೀತಿ ಶ್ರೀ। ಕೆ. ಎಲ್. ಎನ್. ಉಪಾಧ್ಯಾಯ.
೯೩. ಹೊಮಿಯೋಪಥಿ ಚಿಕಿತ್ಸಾಸಾರ ಶ್ರೀ। ಬೋಳೂರು ಎಸ್. ರಾವ್.
೯೪. ಯಕ್ಷಗಾನ ನಾಟಕದ ಪರಂಪರೆ ಮತ್ತು ಕೃತಿಗಳು ಶ್ರೀ। ಮಂಜುನಾಥ ಭಾಗವತ.
೯೫. ಪುನರುಜ್ಜೀವನ (ಏಕಾಂಕ ನಾಟಕ) ಶ್ರೀ। ಗೋವಿಂದ ಭಟ್ಟ, ಶೇಡಿಗುಮ್ಮೆ.
೯೬. ಪ್ರಥಮ ಚಿಕಿತ್ಸೆಯ ಕೈಪಿಡಿ ಶ್ರೀ। ಬೋಳೂರು ಎಸ್. ರಾವ್.
೯೭. ಹಸ್ತರೇಖಾ ವಿಜ್ಞಾನ ಡಾ। ಕೆ. ಕೆ. ಕಲ್ಲೂರ್.
೯೮. ಸ್ವಾತಂತ್ರ್ಯ (ಏಕಾಂಕ ನಾಟಕ) ಶ್ರೀ। ಕೆ. ಎನ್. ಭಟ್, ಶಿರಾಡಿಪಾಲ್.
೯೯. ಭಾರತೀಯ ಸ್ವಾತಂತ್ರ್ಯಸಂಗ್ರಾಮ ಶ್ರೀ। ಎಮ್. ರಘುನಂದನ ರಾವ್.
೧೦೦. ಭಕ್ತ ಕುಚೇಲ (ಏಕಾಂಕ ಸಂಗೀತ ನಾಟಕ) (ದ್ವಿ. ಮು.) ಶ್ರೀ। ಅಂಬಾತನಯ.
೧೦೧. ಉತ್ತರನ ಪೌರುಷ (ಯಕ್ಷಗಾನ) ಶ್ರೀ। ಪುಟ್ಟಣ.
೧೦೨. ಕುಮಾರ (ವಿನೋದ ಕಥೆ) ಶ್ರೀ। ಕುಡ್ಪಿ ವಾಸುದೇವ ಶೆಣೈ.
೧೦೩. ಕೇರಳ ಜ್ಯೋತಿಷ (ಪ್ರಮುಖ ಯೋಗಗಳು) ವೈದ್ಯಗುರು ಎಂ. ಆರ್. ಭಟ್.

೧೦೪. ಒಗಟುಗಳ ಗೊಂಚಲು (ಒಗಟುಗಳು ಭಾಗ ೩) ಡಾ। ಎಸ್. ಪಿ. ಭಟ್.
೧೦೫. ಊರ–ಔಷಧಿಗಳು(ದ್ವಿ. ಮುದ್ರಣ) ಶ್ರೀ। ಬೋಳೂರು ಎಸ್. ರಾವ್.
೧೦೬. ಮದ್ವೆ ಅವಾಂತರ (ಏಕಾಂಕ ಪ್ರಹಸನ) "ಅಷ್ಟಾವಕ್ರ".
೧೦೭. ಜಗತ್ತಿನ ವಿಜ್ಞಾನಿಗಳು ಶ್ರೀ। ಟಿ. ಚಂದ್ರರಾಜ ಸೆಟ್ಟಿ.
೧೦೮. ನಮ್ಮ ದೇಶ ಶ್ರೀ। ಕುಡ್ಪಿ ವಾಸುದೇವ ಶೆಣೈ.
೧೦೯. ಗ್ರಾಮ ಸ್ವಾತಂತ್ರ್ಯ (ಏಕಾಂಕ) ಶ್ರೀ। ಎ. ವಿ. ಮಯ್ಯ.
೧೧೦. ನಮ್ಮ ಕನ್ನಡ ನಾಡು ಶ್ರೀ। ಕುಡ್ಪಿ ವಾಸುದೇವ ಶೆಣೈ.
೧೧೧. ಭಕ್ತ ಧ್ರುವ (ಏಕಾಂಕ ನಾಟಕ) ಶ್ರೀ। ಸುಬ್ರಾಯ, ಅನಂತಪುರ.
೧೧೨. ಕರ್ಣಾಟಕ ಕವಿಚರಿತ್ರೆ ಶ್ರೀ। ಬಿ. ಈಶ್ವರಯ್ಯ.
೧೧೩. ಬೇಡನ ಮಗಳು (ಏಕಾಂಕ ನಾಟಕ) ಶ್ರೀ। ವೆಂಕಟರಾಜ ಪುಣಿಂಚತ್ತಾಯ.
೧೧೪. ಸ್ವಾಮಿ ವಿವೇಕಾನಂದ ಶ್ರೀ। ಎಂ. ಕೃಷ್ಣರಾವ್, ಬಿ.ಎ.
೧೧೫. ನಮ್ಮ ಆಹಾರ ಶ್ರೀ। ಕೆ. ಸಿ. ವೈದ್ಯರ್.
೧೧೬. ಗಾದೆಗಳೂ ಜ್ಞಾನೋಕ್ತಿಗಳೂ ಶ್ರೀಮತಿ ಬೇಬಿ ಸರೋಜಿನಿ.
೧೧೭. ಪುರಂದರದಾಸರು [ಏಕಾಂಕ ನಾಟಕ] ಶ್ರೀ। ಪದ್ಮನಾಭ ಸೋಮಯಾಜಿ.
೧೧೮. ಮನುಷ್ಯಯಜ್ಞ ಶ್ರೀ। ಬಿ. ಶಂಕರ ಭಟ್ಟ.
೧೧೯. ಹೆಮ್ಮಕ್ಕಳ ಹಾಡುಗಳು ಶ್ರೀ। ಪಡಾರು ಮಹಾಬಲೇಶ್ವರ ಭಟ್.
೧೨೦. ನಮ್ಮ ಹಬ್ಬಗಳು ಶ್ರೀ। ಶ್ಯಾಮರ್, ಪುತ್ತೂರು.
೧೨೧. ವೀರಾಗ್ರಣಿ ಕರ್ಣ (ಏಕಾಂಕ ನಾಟಕ) ಶ್ರೀ। ಅಮ್ಮೆಂಬಳ ಆನಂತಯ್ಯ ನಾವಡ.
೧೨೨. ಸೂರ್ಯನೇ ನನಗೆ ಸಾಕ್ಷಿ ಮತ್ತು ಇತರ ಕಥೆಗಳು ಶ್ರೀ। ಎನ್.ಎಸ್.ನವಕಾನ.
೧೨೩. ನವ ಕೈಲಾಸ(ಯಕ್ಷಗಾನ) ಶ್ರೀ। ಮಾಳಕೋಡ ನಾರಾಯಣ.
೧೨೪. ಕುಶ–ಲವ (ಏಕಾಂಕ ಪೌರಾಣಿಕ ನಾಟಕ) ಶ್ರೀ। ಬಿ. ಈಶ್ವರಯ್ಯ.
೧೨೫ ಅಮರನಾಥ ಯಾತ್ರೆ ಶ್ರೀ। ಗುಂಡ್ಮಿ ಮಹಾಬಲ ಭಟ್.
೧೨೬. ಸಂಜ್ಞಾ ಪ್ರಾಧ್ಯಾಪಕ ಮತ್ತು ಇತರ ಕಥೆಗಳು ಶ್ರೀ। ಎಂ.ಕೃಷ್ಣರಾವ್, ಬಿ.ಎ.
೧೨೭. ದ್ವಾರಕಾ ಶ್ರೀ। ಗುಂಡ್ಮಿ ಮಹಾಬಲ ಭಟ್.
೧೨೮. ಭಾರತದ ಸಂಗೀತ ಜ್ಯೋತಿಗಳು ಶ್ರೀ। ಎಚ್. ಸುಂದರರಾಮರಾವ್.
೧೨೯. ಮಕ್ಕಳ ಪದ್ಯಗಳು ಶ್ರೀ। ಅಮ್ಮೆಂಬಳ ಅನಂತಯ್ಯ ನಾವಡ, ವಿದ್ವಾನ್.
೧೩೦. ನಯೆ ಪೈಸೆ
೧೩೧. ತಾಯಿಗಾಗಿ ಮತ್ತು ಇತರ ಕಥೆಗಳು ಶ್ರೀ। ಬಿ.ಶಂಕರಭಟ್, ವಿದ್ವಾನ್.
೧೩೨. ಸಂತ ಮೀರಾಬಾಯಿಯ ಭಜನಾ ಗೀತಗಳು. ಶ್ರೀ। ಎಚ್.ಸುಂದರರಾಮರಾವ್.
೧೩೩. ಅಕ್ಷಯಪಾತ್ರೆ (ಏಕಾಂಕ) ಶ್ರೀ। ಟಿ. ಚಂದ್ರರಾಜ ಸೆಟ್ಟಿ, ಸಿದ್ಧಕಟ್ಟೆ.
೧೩೪. ಉ.ಕ.ದ ಯಕ್ಷಗಾನ ಮಂಡಲಿಗಳು ಶ್ರೀ।ಮಂಜುನಾಥ ಭಾಗವತ, ಕಡತೋಕ.
೧೩೫. ಅಕ್ಬರ–ಬೀರಬಲ ವಿನೋದ (ದ್ವಿ. ಮು.) ಶ್ರೀ। ಮಾಧವ ಭಟ್, ಮಡಿಕೇರಿ.
೧೩೬. ವೈರಾಗ್ಯನಿಧಿ (ಏಕಾಂಕ) ಶ್ರೀ। ಕೆ. ಎಸ್. ಶರ್ಮಾ, ವಿದ್ವಾನ್.
೧೩೭. ಭರತನ ಬಂಧುಪ್ರೇಮ (ಏಕಾಂಕ) ಶ್ರೀ। ಅಮ್ಮೆಂಬಳ ಅನಂತಯ್ಯ ನಾವಡ.
೧೩೮. ದ್ವಾದಶ ಜ್ಯೋತಿರ್ಲಿಂಗಗಳು ಶ್ರೀ। ಗುಂಡ್ಮಿ ಮಹಾಬಲ ಭಟ್ಟ.

೧೩೯.	ಪರೀಕ್ಷೆ ಮತ್ತು ಇತರ ಕಥೆಗಳು	ಶ್ರೀ। ಎಂ. ಗೋಪಾಲ ಭಟ್.
೧೪೦.	ಗಿಲ್ಟು ಮಾಡುವ ವಿಧಾನಗಳು	ಶ್ರೀ। ಎಂ. ಶ್ರೀನಿವಾಸರಾವ್.
೧೪೧.	ಕನ್ನಡ ಗಾದೆಗಳು	ಶ್ರೀ। ಕುರಾಡಿ ಸೀತಾರಾಮ ಅಡಿಗ.
೧೪೨.	ಮಹಾತ್ಮಾ ಉದಂಕ (ಏಕಾಂಕ ನಾಟಕ)	ಪಂಜೆಲ "ಶಿವಶಂಕರ"
೧೪೩.	ಭಕ್ತ ಪ್ರಹ್ಲಾದ (ಪೌರಾಣಿಕ ಏಕಾಂಕ ನಾಟಕ)	ಶ್ರೀ। ಎ. ವಿ. ಮಯ್ಯ.
೧೪೪.	ಧುನಿರಾಣಿ ಗಂಗೆ	ಶ್ರೀ। ಕೆ. ಸುಭಾಷ್ಚಂದ್ರ ಶೆಣೈ.
೧೪೫.	ಸರ್ವಜ್ಞ ವಚನಗಳು [ಭಾಗ ೧]	ಶ್ರೀ। ಕುಡ್ಪಿ ವಾಸುದೇವ ಶೆಣೈ.
೧೪೬.	ಅಭಿಮನ್ಯು ಅಥವಾ ಚಕ್ರವ್ಯೂಹ	ಶ್ರೀ। ಬಿ. ಈಶ್ವರಯ್ಯ, ಪೆರ್ಲ.
೧೪೭.	ಗಾನ ಕುಸುಮ (ಮಕ್ಕಳ ಹಾಡುಗಳು)	ಶ್ರೀ। ಕೆ. ಎಸ್. ಪದ್ಮನಾಭ ಆಚಾರ್ಯ.
೧೪೮.	ಚಾಣಕ್ಯ ಶತಕ—ಭಾಗ ೧	ಡಾ। ಟಿ. ಪಿ. ಭಟ್, ಮಂಗಳೂರು.
೧೪೯.	ಚಾಣಕ್ಯ ಶತಕ—ಭಾಗ ೨	,, ,,
೧೫೦.	ವರಕವಿ ಮುದ್ದಣ	ಶ್ರೀ। ಟಿ. ಚಂದ್ರರಾಜ ಸೆಟ್ಟಿ, ಸಿದ್ಧಕಟ್ಟೆ.
೧೫೧.	ಲೋಕಮಾನ್ಯ ಬಾಲಗಂಗಾಧರ ತಿಲಕ	ಶ್ರೀ। ಟಿ. ರಘುನಂದನರಾವ್.
೧೫೨.	ಮಚ್ಚಗಳು: ಅದರ ಪರಿಣಾಮಗಳು	ವೈದ್ಯಗುರು ಎಂ. ಆರ್. ಭಟ್.
೧೫೩.	ಭಾರತದ ವೀರನಾರಿಯರು (ಕತೆಗಳು)	
೧೫೪.	ಮೂಕರಾಣಿ (ಕತೆ)	ಸಾಮ್ರಾಟ್ ವಿಕ್ರಮಾದಿತ್ಯನ ಒಂದು ಕಥೆ.
೧೫೫.	ಅಷ್ಟಾವಕ್ರ ಮತ್ತು ನಿವೃತ್ತಿ ನಿರತ	ವೈದ್ಯಗುರು ಎಂ. ಆರ್. ಭಟ್.
೧೫೬.	ನಮ್ಮ ಮೈಸೂರು ರಾಜ್ಯ	
೧೫೭.	ವಿನೋದದ ಗಣಿತ	ಶ್ರೀ। ಟಿ. ಚಂದ್ರರಾಜ ಸೆಟ್ಟಿ.
೧೫೮.	ವಿಷಬೀಜ (ಪೌರಾಣಿಕ ಏಕಾಂಕ)	ಶ್ರೀ। ಕೆ. ಗೋವಿಂದ ಭಟ್ಟ.
೧೫೯.	ಮೈಸೂರು ರಾಜ್ಯದ ಪ್ರೇಕ್ಷಣೀಯ ಸ್ಥಳಗಳು	ಶ್ರೀ। ವೈ. ಮಹಾಲಿಂಗ ಭಟ್ಟ.
೧೬೦.	ಬಲಿ ಬಂಧನ (ಪೌರಾಣಿಕ ಏಕಾಂಕ)	ಶ್ರೀ। ಎಸ್. ತಿರುಮಲೇಶ್ವರ ಭಟ್.
೧೬೧.	ವೀರ ಜನನಿ (ಗೀತಾ ನಾಟಕ)	ಶ್ರೀ। ಎಸ್. ಗೋಪೀಚಂದರಾವ್.
೧೬೨.	ವಿಷದ ಅಂಗಿ ಮತ್ತು ಇತರ ಕಥೆಗಳು	ಶ್ರೀ। ಅಮ್ಮೆಂಬಳ ಅನಂತಯ್ಯ ನಾವಡ.
೧೬೩.	ಶಕುಂತಲಾ (ಪೌರಾಣಿಕ ಏಕಾಂಕ)	ಶ್ರೀ। ಬಿ. ಈಶ್ವರಯ್ಯ.
೧೬೪.	ಶ್ರೀ ಪುರಂದರದಾಸರ ಭಜನಾಗೀತಗಳು	ಶ್ರೀ। ಎಚ್. ಸುಂದರರಾಮರಾವ್.
೧೬೫.	ಪಂಚಕನ್ಯೆಯರು ಮತ್ತು ಚಿರಂಜೀವಿಗಳು	ಶ್ರೀ। ಸಿ. ಗೋಪಾಲಕೃಷ್ಣಾಚಾರ್ಯ.
೧೬೬.	ರುಕ್ಮಾಂಗದ (ಸಂಗೀತ ಏಕಾಂಕ)	ಶ್ರೀ। ಅಂಬಾತನಯ.
೧೬೭.	ಇಸೋಫನ ಕಥೆಗಳು (ಭಾಗ ೧)	ಶ್ರೀ। ಕುಡ್ಪಿ ವಾಸುದೇವ ಶೆಣೈ.

ವಿಶೇಷ ಪ್ರಕಟಣೆ: **ಮಕ್ಕಳ ಹಾಡುಗಳು** (ದ್ವಿತೀಯ ಮುದ್ರಣ)

‡ಈ ಗುರುತು ಹಾಕಿದ ಪುಸ್ತಕಗಳ ಪ್ರತಿಗಳು ಮುಗಿದಿವೆ.

Edited, Printed & Published by K. V. Shenoy
at The Prabhat Printers, Ltd., Mangalore.